# ಚಿತ್ರ ಪೆಪ್ಪರಮೆಂಟು

■ ಪ್ರಸಾದ ಶೆಣೈ ಆರ್.ಕೆ.
ಕಲೆ: ಸಂತೋಷ್ ಸಸಿಹಿತ್ಲು

‘ನಿಂಗೆ ಏನ್ ಕೊಟ್ರೂ ನಿನ್ ಮುಖ ಹಾಗಲಕಾಯಿ ಹಾಗೆ ಇರ್ತದೆ, ಎಂತ ಸಮಸ್ಯೆ ನಿಂದು? ಫ್ರಿಡ್ಜ್‌ನಲ್ಲಿ ಚಾಕ್ಲೇಟ್ ಉಂಟು, ಓವನ್ ಹತ್ರ ಬ್ರೆಡ್ ಉಂಟು ತಿನ್ನು, ಮೊನ್ನೆ ಒಂದ್ ರಾಶಿ ಕಲರ್ ಪೆನ್ಸಿಲ್ ತಂದುಕೊಟ್ಟಿದ್ದೆ ಅಲಾ, ಚಿತ್ರ ಮಾಡಿದ್ಯಾ ನೀನು? ಹಾಗೇ ಉಂಟು ಅದು, ಮಾಡ್ಬೇಕಾದದ್ದನ್ನು ಮಾಡ್ಬೇಡ ನೀನು’ – ಶಶಿಕಿರಣ ಕಣ್ಣು ಕೆಂಪು ಮಾಡಿಕೊಂಡು ಸಾನ್ವಿಯನ್ನು ನೋಡಿದ. ಸೋಫಾದ ಮೇಲೆ ಏನೂ ಮಾಡದೇ ತಣ್ಣಗೇ ಕೂತಿದ್ದ ಸಾನ್ವಿ, ಅಪ್ಪನ ಕೆಂಪು ಕಣ್ಣನ್ನೊಮ್ಮೆ ದಿಗಿಲಿನಿಂದ ನೋಡಿ ಮತ್ತೆ ತಟಸ್ಥಳಾದಳು. ನಾನು ಏನೂ ಗಲಾಟೆ ಗಿಲಾಟೆ ಮಾಡದೇ ತೆಪ್ಪಗೇ ಕೂತಿದ್ದರೂ ಅಪ್ಪ ಯಾಕೆ ತನ್ನ ಮೇಲೆ ರೇಗುತ್ತಿದ್ದಾನೆ ಎನ್ನುವ ದಿಗಿಲಿತ್ತು ಅವಳ ಕಣ್ಣುಗಳಲ್ಲಿ. ಹೀಗೆ ಅಪ್ಪ ರೇಗೋದು, ತಾನು ಏನೂ ಹೇಳಲಾಗದೇ ಸುಮ್ಮನೇ ಕೂರುವುದು ಯಾವತ್ತಿನ ಸಾಮಾನ್ಯ ಸಂಗತಿ ಎಂದುಕೊಂಡು ಬಾಲ್ಕನಿಯೆಡೆಗೆ ತನ್ನ ಪುಟ್ಟ ಕಣ್ಣುಗಳನ್ನು ಹೊರಳಿಸಿದಳು. ದಿನದಿನವೂ ಬೆಳೆಯುತ್ತ ಇನ್ನೇನು ಆಕಾಶಕ್ಕೇರಿಯೇ ಬಿಡುವೆ, ಎಂದು ಮೈಬಿರಿದು ನಿಂತಿದ್ದ ಅವವೇ ಕಟ್ಟಡಗಳು, ಕಮರ್ಷಿಯಲ್ ಕಾಂಪ್ಲೆಕ್ಸುಗಳು, ಬಿಸಿಲಿಗೆ ಮಿನುಗಿ ಜಗತ್ತಿಗೆ ಬೆಳಕೆಲ್ಲ ನಾನೇ ಕೊಡೋದು ಎಂದು ಸಾರಿ, ಹೊಳಪೇರುತ್ತಿದ್ದ ಐಟಿ ಆಫೀಸ್‌ಗಳು, ನಿಮಗಿಂತಲೂ ಎತ್ತರದಲ್ಲಿರೋದು ನಾನು ಎಂದು ದಿಗಂತದಂಚಿನಲ್ಲಿ ಜಾರಿಹೋಗುತ್ತಿದ್ದ ಏರುಪೋರ್ಟು ಕಡೆಯಿಂದ ಬರುವ ವಿಮಾನಗಳು, ಇಂತದ್ದೇ ಚಿತ್ರಗಳೆಲ್ಲಾ ಕಂಡು ಹೊರಗೆ ನೋಡುವುದೇ ಬೇಡವೆನ್ನಿಸಿತು ಸಾನ್ವಿಗೆ.

ಅವಳು ಶಾಲೆಯಿಂದ ಬಂದು ಅರ್ಧ ಗಂಟೆ ಕಳೆದಿತ್ತಷ್ಟೇ. ಬ್ಯಾಗ್, ಹೆಗಲಿನಿಂದ ಕಳಚಿದ್ದರೂ ಅದರ ಭಾರ ಇನ್ನೂ ಹೆಗಲಲ್ಲಿ ಕೂತಂತಿತ್ತು. ಅಮ್ಮ ಬೆಳಿಗ್ಗೆ ಟಿಫಿನ್ ಬಾಕ್ಸ್‌ನಲ್ಲಿ ಕೊಟ್ಟಿದ್ದ ಜಾಮ್ ಹಚ್ಚಿದ್ದ ಒಂದೆರಡು ಚಪಾತಿ ರೋಲ್ ಮತ್ತು ಕೆಲವು ಮೂಸಂಬಿ ತುಂಡುಗಳಲ್ಲಿ ಮಧ್ಯಾಹ್ನದ ಊಟ ಮುಗಿಸಿ, ಸಂಜೆ ಮೂರಾಗುತ್ತಲೇ ಸ್ಕೂಲ್ ಬಸ್ಸಿನಲ್ಲಿ ಮನೆಗೆ ತಲುಪಿದ್ದಳು.

‘ಇಲ್ ಬಾ ತಗೋ ಇದು, ನನ್ನ ಆಫೀಸಿನ ಟ್ಯಾಬು, ಎಂತ ಗೇಮ್ಸ್ ಬೇಕಾದ್ರೂ ಆಡು, ನಂಗೀಗ ಯೂಸ್ ಇಲ್ಲ ಇದ್ರದ್ದು’ ಎಂದು ಕೋಣೆಯೊಳಗಿಂದ ಬಂದ ಶಶಿಕಿರಣ, ಕಪ್ಪು ಸುಂದರಿಯಂತೆ ಹೊಳೆಯುತ್ತಿದ್ದ ಟ್ಯಾಬ್ ಅನ್ನು

